ತೋರಿಸಿದ್ರ ಅವುನಿಗೆ ಬುದ್ಧಿ ಬರದಿಲ್ಲ ಬುಡು' ಎಂದು ಹೇಳಿದ. ಮೂವ್ವರು ಹೆಣ್ಣುಮಕ್ಕಳನ್ನು ತವರು ಮನಿಗೆ ಬರದಂಗ ರಾಮಲಿಂಗಪ್ಪ ಮಾಡ್ಯಾನ ಎಂದು ಎಲ್ಲರೂ ಬಂದು ಹೇಳಿದರು. ಶಾಂತಲಿಂಗಪ್ಪ 'ಈ ನನ್ನ ಮನೆಯೇ ನಿಮ್ಗ ತವರು ಮನೆ ಅಂತ ತಿಳಿದು ಬನ್ನಿರಿ' ಎಂದು ಹೇಳಿದ. ಅಣ್ಣನ ಹಾವಳಿ ಜಾಸ್ತಿಯಾಯಿತೆಂದು ತಿಳಿದು ಸಿಟ್ಟಿಗೆದ್ದ. ಪೊಲೀಸರ ಸಹಾಯದಿಂದ ತಂದೆ ತಾಯಿಯನ್ನು ತನ್ನ ಮನೆಗೆ ಕರೆತಂದ. ತಂದೆಯಿಂದ ಬಲವಂತವಾಗಿ ಪತ್ರ ಬರೆಸಿಕೊಂಡು ಎಲ್ಲ ಆಸ್ತಿ ತನಗೆ ಸೇರಿದ್ದೆಂದು ತಿಳಿದಿರುವ ಬಗ್ಗೆ ವಕೀಲರಲ್ಲಿ ಚರ್ಚಿಸಿದ. ಎರಡು ಪಾಲಲ್ಲ,ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೂ ಪಾಲಿದೆ ಎಂದು, ಐದು ಭಾಗ ಮಾಡಬೇಕೆಂದು ತಂದೆಯ ಜತೆ ಸೇರಿ ಕೋರ್ಟಿಗೆ ಹೋದರು. ಲಾಯರ್ ನೋಟಿಸ್ ರಾಮಲಿಂಗಪ್ಪನಿಗೆ ಹೋಯಿತು. ಸಿಟ್ಟಿಗೆದ್ದ ಆತ ಹಳ್ಳಿಯ ನಾಕಾರ ಮಂದಿಯ ಜತೆ ಶಾಂತಲಿಂಗಪ್ಪನ ಕಾಲೇಜಿಗೆ ಬಂದು ಹಲ್ಲೆ ಮಾಡಿ, ಬಡಿದು ಹೆದರಿಸಿ ಹೋದರು. ಶಾಂತಲಿಂಗಪ್ಪ ತನ್ನ ಮೇಲೆ ಆದ ಹಲ್ಲೆಯನ್ನು ಪೊಲೀಸರಿಗೆ ಲಿಖಿತ ರೂಪದಲ್ಲಿ ಕಂಪ್ಲೇಂಟ್ ನೀಡಿದ. ಪೊಲೀಸ್ ಠಾಣೆಯಲ್ಲಿ ಶಾಂತಲಿಂಗಪ್ಪನವರ ಶಿಷ್ಯ ಒಬ್ಬ ಸಬ್ ಇನ್‌ಸ್ಪೆಕ್ಟರ್ ಆಗಿ ಬಂದಿದ್ದ. ಗುರುಗಳ ಮೇಲೆ ಹಲ್ಲೆ ಮಾಡಿದವರನ್ನು ಹುಡುಕಿ ಅರೆಸ್ಟ್ ಮಾಡಿ ಸ್ಟೇಷನ್‌ಗೆ ತಂದು ವಿಚಾರಿಸಿದ. ಆ ವೇಳೆ ರಾಮಲಿಂಗಪ್ಪ ಒರಟಾಗಿ ಮಾತಾಡಿದ್ದರಿಂದ ಶಿಷ್ಯನಾದ ಇನ್‌ಸ್ಪೆಕ್ಟರ್ ಸರಿಯಾಗಿ ಬಾರಿಸಿ, ಕೇಸುಗಳನ್ನು ಹಾಕಿಸಿ ಮೆತ್ತಗೆ ಮಾಡಿದ್ದ. ಹೊಡೆತಗಳನ್ನು ತಿಂದ ರಾಮಲಿಂಗಪ್ಪನನ್ನು ನೋಡಿದ ಹಳ್ಳಿಮಂದಿ `ಅಣ್ಣನೆಂಬ ಕಕ್ಕುಲಾತಿ ಇಲ್ಲದವನು. ನಾಕು ಹುಡುಗರಿಗೆ ಪಾಠ ಮಾಡುವವನು. ಕರುಣೆಯಿಲ್ಲದಂಗ ಹೊಡಿಸಿದ್ದಾನ' ಎಂದು ಮಾತಾಡಿಕೊಂಡರು. 'ಮೂವ್ವರು ಹೆಣ್ಣುಮಕ್ಕಳು ಶಾಂತಲಿಂಗಪ್ಪನಲ್ಲಿಗೆ ಬಂದು ಅಣ್ಣನಿಗಾದ ಅವಸ್ಥೆ ಹೇಳಿ ಗೋಳೋಂತ ಅತ್ತರು. ಶಾಂತಲಿಂಗಪ್ಪ ಯಾರು ಏನೆಂದರೂ ಕೇಳದೆ ಆಸ್ತಿಯಲ್ಲಿ ಐದು ಭಾಗ ಮಾಡಿಸಲು ಪಟ್ಟು ಹಿಡಿದ...'

ಆತ್ಮಚರಿತ್ರೆಯಲ್ಲಿ ಬರೆದಿದ್ದ ವಿಷಯದ ಸಾರಾಂಶವನ್ನು ಗುರುರಾಜ ಹೇಳಿದ. ಅದು ವೇದವತಿಗೂ ಗೊತ್ತಿತ್ತು.

'ಹಳ್ಳಿ ಜನ ಈ ವಿಷಯವನ್ನು ಆಗಲೇ ಮರ್ತಿರ್‍ತಾರ. ಇಲ್ಲಿ ಸುಮ್ಮನೆ ದಾಖಲು ಮಾಡಿ ಮುಂದಿನವರಿಗೆ ನೆನಪಿಸುವುದು ಯಾಕೆ? ದೊಡ್ಡಪ್ಪನಿಗೆ ಪೊಲೀಸ್ ಇನ್‌ಸ್ಪೆಕ್ಟರ್ ಹೊಡೆದ ಭಾಗವನ್ನು ತೆಗೆದುಬಿಡಿ ಗುರುರಾಜ. ಹಾಗೆ ರಾಮಲಿಂಗಪ್ಪ ದೊಡ್ಡಪ್ಪನೂ ಕಾಲೇಜಿಗೆ ಬಂದು ಅಪ್ಪನ ಮ್ಯಾಲೆ ಹಲ್ಲೆ ಮಾಡಿದ್ದು ತೆಗದುಬಿಡು. ಅಪ್ಪ ಹೆಣ್ಣು ಮಕ್ಕಳಿಗೂ ಆಸ್ತಿ ಕೊಡಿಸಿದ್ದನ್ನು ಬೇಕಾದ್ರೆ ವಿಶೇಷವಾಗಿ ಬಿಂಬಿಸು' ಎಂದು ವೇದಾವತಿ ಹೇಳಿದಳು.

'ಹ್ಞಾಂ ಇನ್ನೊಂದು ಪ್ರಸಂಗವನ್ನು ರಿಪೇರಿ ಮಾಡ್ಬೇಕು. ಅದೇ ಅಪ್ಪನ ಕಾಲೇಜಿನಲ್ಲಿ ಅಟೆಂಡರ್ ಆಗಿದ್ದ ಮಹಿಳೆ. ಆಕೆ ಸರ್ಕಾರಿ ನೌಕರಳು. ವಯಸ್ಸು ಮೂವತ್ತೈದು ಇರ್ಬೇಕು. ಅಪ್ಪ ಪ್ರಿನ್ಸಿಪಾಲ ಇದ್ದಾಗ ಆಕೆ ಕಾಲೇಜಿನಲ್ಲಿದ್ದ ಲೆಕ್ಚರರ್‌ಗಳನ್ನು ಹಿಡಿತದಲ್ಲಿಟ್ಟುಕೊಂಡಿದ್ದಳು. ಕೆಲವರು ಆಕೆಯನ್ನು ಬಳಸುತ್ತಿದ್ದರು. ತನ್ನ ಸ್ಥಾನಮಾನ ಮೀರಿ ವರ್ತನೆ ಮಾಡುತ್ತಿದ್ದಳು. ಅಪ್ಪ ನಿಷ್ಠುರವಾಗಿ ವಾರ್ನಿಂಗ್ ಮಾಡುತ್ತಿದ್ದರು. ಆಕೆಯನ್ನು ಬಳಸುತ್ತಿದ್ದ ಕೆಲವರ ಕುಮ್ಮಕ್ಕಿನಿಂದ ಅಪ್ಪನನ್ನೂ ಕೇರ್ ಮಾಡದೆ ನಡಕೊಳ್ಳುವುದು ಅತಿಯಾದಾಗ ಅಪ್ಪ ಮೇಲಧಿಕಾರಿಗಳ ಗಮನಕ್ಕೆ ತರುತ್ತಾರೆ. ಇದರಿಂದ ಆ ಮಹಿಳೆ ಅಪ್ಪನ ಮೇಲೆ ಲೈಂಗಿಕ ಕಿರುಕುಳ ನೀಡುತ್ತಾರೆಂದು ಆರೋಪಿಸಿದಾಗ ಅದು ಪತ್ರಿಕೆಯಲ್ಲಿ ಬರುತ್ತದೆ. ಆದರೆ, ಆಕೆ ಲಿಖಿತವಾಗಿ ಆರೋಪ ಮಾಡಿರುವುದಿಲ್ಲ. ಒಂದು ರಜಾ ದಿನದ ಹಿಂದಿನ ದಿನ ಆ ಮಹಿಳೆ ಕಾವಲುಗಾರನ ಬಳಿ ಬಂದು 'ನಾಳೆ ರಜೆ ಐತೆ ಕಾಲೇಜಿಗೆ. ಒಂದೆರಡು ರೂಮಿನ ಕಸ ಬಳಿತೀನಿ. ಬೀಗದ ಕೈ ಕೊಡಣ್ಣ' ಎಂದು ಕೇಳಿ ಪಡೆದಿದ್ದಳು. ಆದರೆ, ಆ ಮಹಿಳೆ ಅದೇ ಕಾಲೇಜಿನ ಒಬ್ಬ ಉಪನ್ಯಾಸಕನ ಜತೆ ಚಕ್ಕಂದ ಆಡಿ ಹೋಗಿರುತ್ತಾಳೆ. ಆಕೆಯ ಸ್ವಭಾವ ಗೊತ್ತಿದ್ದ ಕಾವಲುಗಾರ ಕಾಯ್ದು ವಿಡಿಯೋ ಮಾಡಿರುತ್ತಾನೆ. ಅದನ್ನು ಅಪ್ಪನಿಗೆ ತೋರಿಸುತ್ತಾನೆ. ಕಾಲೇಜಿನ ಕೊಠಡಿಯನ್ನು ಅಟೆಂಡರ್ ಮಹಿಳೆ ಮತ್ತು ಉಪನ್ಯಾಸಕ ಒಬ್ಬರ ನಂತರ ಒಬ್ಬರು ಒಳ ಹೊಕ್ಕದ್ದು, ಹೊರಬಂದದ್ದು ಚಿತ್ರೀಕರಣವಿತ್ತು. ಅಪ್ಪ ಮೇಲಧಿಕಾರಿಗೆ ವರದಿ ಮಾಡಿದ್ದು, ಆಕೆ ಅಮಾನತ್ತು ಆದದ್ದು, ಸುದ್ದಿ ಕಾಲೇಜಿನಲ್ಲಿ ಹರಿದಾಡಿದ್ದು, ಕೊನೆಗೆ ಆಕೆಯನ್ನು ದೂರದ ಊರಿಗೆ ವರ್ಗಾವಣೆ ಮಾಡಿ ಅಪ್ಪ ನಿರುಮ್ಮಳವಾದದ್ದು... ಪ್ರಸಂಗ ಬರ್‍ತದೆ. ಅದನ್ನು...'

'ಹೌದು ಮೇಡಮ್, ನಾನೇ ಹೇಳಬೇಕೆಂದಿದ್ದೆ. ಆಕೆಗೆ